ಪ್ರಜಾವಾಣಿ

**Thursday, March 25th, 2010**

# ಅಮೆರಿಕದಲ್ಲಿ ಜೈನ್ 'ಡ್ರೋಣ್'



ಕ್ಯಾಲಿಫೋರ್ನಿಯಾದಲ್ಲಿ ಏರೋ ಮಾಡಲಿಂಗ್ ಪ್ರದರ್ಶಿಸುತ್ತಿರುವ 'ಡ್ರೋಣ್' ತಂಡ

ಭಾರತೀಯ ವಿಶ್ವವಿದ್ಯಾಲಯವೊಂದು ಇದೇ ಮೊದಲ ಬಾರಿ ವೈಮಾನಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದೆ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಡೆದ 2010ರ ಏರ್‌ಕ್ರಾಫ್ಟ್ ವಿನ್ಯಾಸದ ಮೌಖಿಕ ವಿವರಣೆಯ ಸ್ಪರ್ಧೆಯಲ್ಲಿ ನಗರದ ಜೈನ್ ವಿಶ್ವವಿದ್ಯಾಲಯ ಅಂಥ ಹಿರಿಮೆಗೆ ಪಾತ್ರವಾಗಿದೆ. ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ ನಗರದ ವಿದ್ಯಾರ್ಥಿಗಳು ದೇಶದ ಕೀರ್ತಿ ಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಿದ್ದಾರೆ.

ವೈಮಾನಿಕ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿ ಪ್ರತಿವರ್ಷ ಕಾಲೇಜು ಮಟ್ಟದ ಅಂತರ್ರಾಷ್ಟ್ರೀಯ ಏರ್‌ಕ್ರಾಫ್ಟ್ ವಿನ್ಯಾಸದ ಸ್ಪರ್ಧೆಯನ್ನು ಅಮೆರಿಕದಲ್ಲಿರುವ ವೃತ್ತಿನಿರತ ಸಂಸ್ಥೆಗಳಾದ ಸೊಸೈಟಿ ಆಫ್ ಆಟೋಮೋಟಿವ್ ಎಂಜಿನೀಯರ್ಸ್ (SAE), ನಾಸಾ ಮತ್ತು ಲಾಕ್‌ಹಿಡ್ ಮಾರ್ಟಿನ್ ಏರ್ಪಡಿಸುತ್ತವೆ. ಇಲ್ಲಿ ಸ್ಪರ್ಧೆಗಳು ಮೂರು ಹಂತಗಳಲ್ಲಿ ನಡೆಯುತ್ತವೆ. ಮೊದಲನೆಯದು ಅಡ್ವಾನ್ಸ್ಡ್, ಎರಡನೆಯದು ರೆಗ್ಯುಲರ್ ಹಾಗೂ ಮೂರನೆಯದು ಸೂಕ್ಷ್ಮ/ಕಿರು ವಿನ್ಯಾಸ ಜೋಡಣೆ.

ಈ ಮೂರರಲ್ಲಿ ನಗರದ ಜೈನ್ ವಿಶ್ವವಿದ್ಯಾಲಯದ 'ಡ್ರೋಣ್' ತಂಡ ಕಿರು ವಿನ್ಯಾಸ ಜೋಡಣೆಯಲ್ಲಿ ಪ್ರಶಸ್ತಿಗಳನ್ನು ಪಡೆದಿದೆ. ಈ ತಂಡದಲ್ಲಿ ಮೆಕ್ಯಾನಿಕಲ್ ಹಾಗೂ ಎಲೆಕ್ಟ್ರಿಕಲ್ ವಿಭಾಗದಲ್ಲಿ ಮೂರನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಎಂಟು ವಿದ್ಯಾರ್ಥಿಗಳು ಮಾಡಿರುವ ಅದ್ಭುತ ವಿನ್ಯಾಸಕ್ಕೆ ಪ್ರಥಮ ಹಾಗೂ ಹಾರಾಟದಲ್ಲಿ ಮೂರನೇ ಬಹುಮಾನ ಬಂದಿದೆ.

ಅಮೆರಿಕದಲ್ಲಿ ಪ್ರತಿವರ್ಷ ಇದೇ ಮಾದರಿಯಲ್ಲಿ ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿ ಎಂಬ ಎರಡು ಸ್ಪರ್ಧೆಗಳು ನಡೆಯುತ್ತವೆ. ಪಶ್ಚಿಮ ಕರಾವಳಿಯಲ್ಲಿನ ಕ್ಯಾಲಿಫೋರ್ನಿಯಾದ ವ್ಯಾನ್ ನ್ಯೂಯಾಸ್‌ನಲ್ಲಿ ಇದೇ ತಿಂಗಳ 10ರಂದು ನಡೆದ ಸ್ಪರ್ಧೆಯಲ್ಲಿ ಭಾರತವೂ ಸೇರಿದಂತೆ ವಿಶ್ವ ಮಟ್ಟದ 44 ತಂಡಗಳು ಭಾಗವಹಿಸಿದ್ದವು (ಮತ್ತೊಂದು ಸ್ಪರ್ಧೆ ಪೂರ್ವ ಕರಾವಳಿಯ ಟೆಕ್ಸಾಸ್‌ನಲ್ಲಿ ಮುಂದಿನ ತಿಂಗಳು ನಡೆಯಲಿದೆ). ಈ ಸ್ಪರ್ಧೆಯಲ್ಲಿ 'ಡ್ರೋಣ್' ತಂಡವು ಅಮೆರಿಕ ಹಾಗೂ ಯುರೋಪ್ ರಾಷ್ಟ್ರಗಳ ಎದುರು ಕಠಿಣ ಸ್ಪರ್ಧೆಯನ್ನು ಎದುರಿಸಿತು.

'ಅಮೆರಿಕ ಹಾಗೂ ಯುರೋಪ್ ರಾಷ್ಟ್ರಗಳಲ್ಲಿ ವಿಮಾನ ತಯಾರಿಕೆಗೆ ಬೇಕಾಗುವ ಎಲ್ಲಾ ಬಗೆಯ ಕಚ್ಚಾ ಸಾಮಗ್ರಿಗಳು ಸುಲಭವಾಗಿ ದೊರಕುತ್ತವೆ. ಆದರೆ ನಾವು ಪ್ರತಿಯೊಂದು ಪದಾರ್ಥವನ್ನೂ ಆಮದು ಮಾಡಿಕೊಳ್ಳಬೇಕು. ಇದು ದುಬಾರಿಯೂ ಹೌದು ಹಾಗೂ ಇದರಿಂದ ವಿಳಂಬವೂ ಆಗುತ್ತದೆ. ಆದರೂ ನಮ್ಮ ವಿಶಿಷ್ಟ ಮಾದರಿಯ ವಿನ್ಯಾಸ ಎಲ್ಲರ ಮನ ಗೆದ್ದಿತು. ರೆಕ್ಕೆ ಚಿಕ್ಕದಾಗಿದ್ದರೂ 800 ಗ್ರಾಂ ತೂಕವನ್ನು ಹೊತ್ತು ಯಶಸ್ವಿ ಹಾರಾಟ ನಡೆಸಿತು' ಎಂದು ತಂಡದ ಸದಸ್ಯರು ಹೆಮ್ಮೆಯಿಂದ ಹೇಳುತ್ತಾರೆ.

ಡ್ರೋಣ್ ತಂಡದ ವಿನ್ಯಾಸದ ವಿಮಾನಕ್ಕೆ 'ಹೈಡೆನ್ಸಿಟಿ ಫೋಮ್'ನಿಂದ ರೆಕ್ಕೆಗಳನ್ನು ಮಾಡಲಾಗಿದೆ. ಬಾಲ್ಸಾ ಮರದಿಂದ ವಿಮಾನದ ಮುಖ್ಯ ಭಾಗವನ್ನು ನಿರ್ಮಿಸಲಾಗಿದೆ. 'ವಿಮಾನ ಅಳತೆಯೂ ಸಹ ಇಷ್ಟೇ ಇರಬೇಕೆಂಬ ನಿಬಂಧನೆಗೆ ಒಳಪಟ್ಟಿರುತ್ತದೆ. ಡ್ರೋಣ್ ತಂಡ ವಿನ್ಯಾಸ ಮಾಡಿದ ವಿಮಾನವು 18"X13"X5" ಅಳತೆಯ ಪೆಟ್ಟಿಗೆಯಲ್ಲಿ ಸರಿಯಾಗಿ ಕೂರುತ್ತಿತ್ತು. ವಿಮಾನ ಹಾರಾಟ ನಡೆಸುವ ಮುನ್ನ ವಿಮಾನದ ಬಿಡಿ ಭಾಗಗಳನ್ನು ಕೇವಲ ಮೂರು ನಿಮಿಷದೊಳಗೆ ಜೋಡಿಸಬೇಕು. ಆದರೆ ನಾವು ಕೇವಲ ಎರಡು ನಿಮಿಷ ಹಾಗೂ 10 ಸೆಕೆಂಡುಗಳಲ್ಲಿ ಜೋಡಿಸಿದೆವು' ಎಂದು ಹೇಳುತ್ತಾರೆ.

ಡ್ರೋಣ್ ತಂಡದಲ್ಲಿ ಚಂದನ್ ಪ್ರಸಾದ್, ದರ್ಶನ್, ಎನ್.ಆರ್.ಅನುರಾಗ್ ಜೋಶಿ, ಶ್ರೇಯಸ್ ರೆಡ್ಡಿ, ನಿಖಿಲ್ ಪಾಂಡೆ, ಡಿ.ಎಸ್.ಶ್ರೇಯಸ್, ರವಿ ತೇಜಾ, ಜಾರ್ಜ್ ಮ್ಯಾಥ್ಯೂ ಇದ್ದರು. ಇವರಿಗೆ ಡಾ.ಕೃಷ್ಣ ವೆಂಕಟೇಶ್, ಎಂ.ಎಸ್.ಸಂತೋಷ್, ಟಿ.ಪಿ.ನಿತಿನ್, ಕೃಷ್ಣ ಕಿಶೋರ್, ಟಿ.ಎನ್.ನವೀನ್ ಹಾಗೂ ಎಸ್.ಪ್ರಜ್ವಲ್ ಮಾರ್ಗದರ್ಶನ ನೀಡಿದ್ದಾರೆ. ಜತೆಗೆ ಜೈನ್ ವಿಶ್ವವಿದ್ಯಾಲಯದ ಮುಖ್ಯಸ್ಥ ಚಿನ್‌ರಾಜ್ ಜೈನ್ ಅವರ ಮಾರ್ಗದರ್ಶನದೊಂದಿಗೆ ಈ ತಂಡ ಇಂಥದ್ದೊಂದು ಸಾಧನೆ ಮಾಡಿದೆ.

ಉಪನ್ಯಾಸಕರು ಹಾಗೂ ಕಾಲೇಜಿನ ಹಿರಿಯರ ಮಾರ್ಗದರ್ಶನದಿಂದ ಆಯ್ಕೆಯಾದ ಈ ಸ್ಪರ್ಧೆಯ ಮೂಲಕ ವಿವಿಧ ದೇಶಗಳ ತಂತ್ರಜ್ಞಾನಗಳನ್ನು ಹತ್ತಿರದಿಂದ ನೋಡುವ ಅವಕಾಶ ಲಭಿಸಿತು. ಜತೆಗೆ ವಿಚಾರ ವಿನಿಮಯಕ್ಕೂ ಸಹ ಇದೊಂದು ಸೂಕ್ತ ವೇದಿಕೆಯಾಗಿತ್ತು. ವಿಮಾನ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸೂಕ್ತ ಅಭ್ಯರ್ಥಿಗಳ ಹುಡುಕಾಟದಲ್ಲಿರುವ ಕೆಲವು ಅಮೆರಿಕದ ಕಂಪನಿಗಳೂ ಸಹ ಸ್ಥಳದಲ್ಲಿಯೆ ನೇಮಕಾತಿಯನ್ನೂ ಸಹ ನೀಡುತ್ತಾರೆ.

ಈ ಹಿಂದೆ ಇದೇ ವಿಶ್ವವಿದ್ಯಾಲಯದ ಮತ್ತೊಂದು ತಂಡ 2009ರಲ್ಲಿ ಅಂಟ್ಲಾಂಟಾದಲ್ಲಿ ನಡೆದ ಮೈಕ್ರೊ ಏರ್‌ವೆಹಿಕಲ್ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ಪಡೆದಿತ್ತು. ಇದರಿಂದ ಉತ್ತೇಜಿತರಾದ ಡ್ರೋಣ್ ತಂಡ ಬರುವ ಜುಲೈನಲ್ಲಿ ಜರ್ಮನಿಯ ಬ್ರೌನ್ಸ್‌ವೇಗ್ ನಲ್ಲಿ ನಡೆಯಲಿರುವ ಅಂತರ್‌ರಾಷ್ಟ್ರೀಯ ಏರ್‌ವೆಹಿಕಲ್‌ಸ್ಪರ್ಧೆಯಲ್ಲಿ ಭಾಗವಹಿಸಲು ತಯಾರಿ ನಡೆಸುತ್ತಿದೆ.

■ ನಂಜೇಗೌಡ ಎಂ.ಜೆ